ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿರುವ ಹುದ್ದೆಗಳ ಭರ್ತಿ

43 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಕ.ವಿ.ಮಂ) ಲೈನ್ಮನ್ಗಳು, ಮೀಟರ್ರಾರರುಗಳು ಹಾಗೂ ಇತರ ಸಹಾಯಕ ಸಿಬ್ಬಂದಿಗಳು ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಕ.ವಿ.ಮಂ) ಯಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಮತ್ತು ವಿವರಗಳೇನು?*

ಇ) *ಮೇಲ್ಕಂಡ ನೌಕರರ ನೇಮಕಾತಿಗಾಗಿ ಕ.ವಿ. ಮಂಡಳಿಯವರು ಯಾವ ಕ್ರಮ ಕೈಗೊಳ್ಳುವರು?*

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):

ಅ) ಬಂದಿದೆ.

ಆ) ಖಾಲಿ ಇರುವ ಹುದ್ದೆಗಳ ವಿವರ

1)	ಗ್ರೂಪ್ 'ಎ'	7
2)	ಗ್ರೂಪ್ 'ಬಿ'	29
3)	ಗ್ರೂಪ್ 'ಸಿ'	389
4)	ಗ್ರೂಪ್ 'ಡಿ'	311

ಒಟ್ಟು 736 ಹುದ್ದೆಗಳು

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ವಿಜಯಕುಮಾರಶೆಟ್ಟಿ: ಮಾನ್ಯ ಅಧ್ಯಕ್ಷರೇ, ಈಗ ಕೆ.ಇ.ಬಿ. ಮಟ್ಟಿಗೆ ಹೇಳುವುದಾದರೆ ಜನಸಾಮಾನ್ಯರಲ್ಲಿ ಬಹುಶಃ ಬಹಳಷ್ಟು ಅತೃಪ್ತಿ ಇರುವ ಒಂದು ಇಲಾಖೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈಗಾಗಲೇ ಮಂಗಳೂರು ಸಿಟಿ ಕಾರ್ಪೊರೇಷನ್ ಮತ್ತೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಎಲ್ಲಾ ಮಂಡಲ್ ಪಂಚಾಯತಿಗಳಿಂದ ಹಣ ಕಟ್ಟಿಸಿಕೊಂಡು ಒಂದು ವರ್ಷ, ಎರಡು ವರ್ಷ ಆದರೂ ಕೂಡ ಇನ್ನೂ ಕಂಬಗಳನ್ನು, ಲೈನ್ಗಳನ್ನು ಹಾಕಿಲ್ಲ. ತಮ್ಮ ಉತ್ತರದಲ್ಲಿ ಕೊಟ್ಟಿದ್ದೀರಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಗ್ರೂಪ್ ಸಿ 389 ನೌಕರರ ಹುದ್ದೆಗಳು ಖಾಲಿ ಇವೆಯೆಂದು. ಗ್ರೂಪ್ ಡಿ 311 ಖಾಲಿ ಇದೆ. ದೊಡ್ಡ ದೊಡ್ಡ ಫ್ಯಾಕ್ಟರಿಗಳೆಲ್ಲ ಬರುತ್ತವೆ ಅಂತ ಹೇಳುತ್ತೇವೆ. ಆದರೆ ಈ ತರಸ್ಸರ್ಶದಲ್ಲಿ ಕೆಲಸ ಮಾಡುವಂಥ ನೌಕರರು ಇಲ್ಲದೇ ಇದ್ದು ಬಹು ತೊಂದರೆಯಾಗುತ್ತಿದೆ. ಆದ್ದರಿಂದ ಆದಷ್ಟು ಬೇಗ ಈ ಗ್ರೂಪ್ ಸಿ ಮತ್ತು ಡಿ ನೌಕರರನ್ನು ಆಪಾಯಿಂಟ್ಮೆಂಟ್ ಮಾಡಿಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಾ ಇದ್ದೇನೆ.

ಶ್ರೀ. ಕೆ.ಎ. ನಿಸಾರ್ ಅಹಮದ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುತ್ತೂರು ಮತ್ತು ಉಡುಪಿ ಹಾಗೂ ಮಂಗಳೂರಿನಲ್ಲಿ ಈ ಲೈನ್ಮನ್ ಮತ್ತು ಮೀಟರ್ರೀಡರ್ಗಳ ಮತ್ತು ಇತರೆ ಸಿಬ್ಬಂದಿಗಳ ಹುದ್ದೆಗಳು ಖಾಲಿ ಇರುವುದರ ಬಗ್ಗೆ ನನಗೆ ತಿಳಿಸಿದ್ದಾರೆ. ಇದು ಆಗಲೇ ನಮ್ಮ ಮಂಡಳಿಯ ಗಮನಕ್ಕೆ ಬಂದಿದೆ. ಖಾಲಿ ಇರುವ ಹುದ್ದೆಗಳು ಗ್ರೂಪ್ ಎ ನಲ್ಲಿ7, ಗ್ರೂಪ್ ಬಿ ನಲ್ಲಿ 29 ಖಾಲಿ ಇವೆ. ಗ್ರೂಪ್ ಸಿ ನಲ್ಲಿ 389 ಮತ್ತು ಗ್ರೂಪ್ ಡಿ ನಲ್ಲಿ 311 ಹುದ್ದೆಗಳು ಖಾಲಿ ಇವೆ. ಮಾನ್ಯ ಸದಸ್ಯರು ಇವುಗಳನ್ನು ಭರ್ತಿ ಮಾಡುವುದಕ್ಕೆ

ಹೇಳಿದ್ದಾರೆ. ಇದನ್ನು ಆದಷ್ಟು ಬೇಗನೆ ಪರಿಶೀಲಿಸಿ ಭರ್ತಿ ಮಾಡುತ್ತೇವೆ ಎಂದು ನಾನು ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಇಷ್ಟು ವೇಕೆನ್ಸಿ ಇದೆ. ಇಡೀ ರಾಜ್ಯದಲ್ಲಿ ಬಹಳಷ್ಟು ವೇಕೆನ್ಸಿ ಇರುವುದರಿಂದ ನೇಮಕಾತಿ ಶೀಘ್ರವಾಗಿ ಮಾಡಬೇಕು. ಕೈಗಾರಿಕೆಯಲ್ಲಿ ನಮ್ಮ ರಾಜ್ಯವನ್ನು 4ನೇ ಹಂತಕ್ಕೆ ತರುತ್ತೇವೆಂದು ನಾವು ಆಶ್ವಾಸನೆ ಕೊಡುತ್ತಿದ್ದೇವೆ. ಈ ಆಶ್ವಾಸನೆ ನೇರವೇರಲಿಕ್ಕಿಲ್ಲ. ಆದ್ದರಿಂದ ಈ ನೇಮಕಾತಿಯಾಗಬೇಕು. ಮತ್ತೊಂದು, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಮಣ್ಣಗುಡ್ಡೆಯಲ್ಲಿ ಸಬ್‌ಸ್ಟೇಷನ್ಸ್‌ಗೆ ಫೌಂಡೇಷನ್ ಸ್ಟೋನ್ ಹಾಕಿ ಸುಮಾರು ಒಂದು ವರ್ಷವಾಯಿತು. ಇನ್ನೂ ಇದರ ಕಾರ್ಯ ಪ್ರಾರಂಭ ಮಾಡಿಲ್ಲ. ಅದೇ ಪ್ರಕಾರ ನನ್ನ ಮತಕ್ಷೇತ್ರವಾದ ಕಾಟಿಪಾಳ್ಯದಲ್ಲಿ ಪುನರ್ ವಸತಿ ಕೇಂದ್ರ ಕೂಡ ಆಗಿದೆ. ಅದಕ್ಕೆ ಸ್ಯಾಂಕ್ಷನ್ ಆಗಿ, ಜಾಗ ಸಿಗಲಿಲ್ಲವೆಂದು ಹೇಳುತ್ತಾ ಇದ್ದರು. ಇಲ್ಲಿಗೆ ಸಬ್ಸ್ಟೇಷನ್ ಕೊಡುತ್ತೇವೆಂದು ಒಂದೆರಡು ವರ್ಷದಿಂದ ಹೇಳುತ್ತಾ ಬಂದಿದ್ದಾರೆ. ಇಷ್ಟರವರೆಗೆ ಆಗಲಿಲ್ಲ. ಮಣ್ಣಗುಡ್ಡೆ ಮತ್ತು ಕಾಟಿಪಾಳ್ಳ ಸಬ್ ಸ್ಟೇಷನ್ಗಳನ್ನು ಕೂಡಲೇ ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತು ಇತ್ತೀಚಿನ ಪತ್ರಿಕಾ ಹೇಳಿಕೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಮಂಗಳೂರಿಗೆ ಮಾರಾಹಿಯಿಂದ ಇನ್ನೊಂದು ಲೈನನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆಯೂ ತಾವೇನು ಮಾಡಿದ್ದೀರೆಂಬುದನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಕೆ.ಎ. ನಿಸಾರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಖಾಲಿ ಹುದ್ದೆ ಬಗ್ಗೆ ಮಾತನಾಡಿದ್ದಾರೆ. ಅಲ್ಲಿ ತೊಂದರೆಯಾಗುತ್ತಿರುವುದು ವಿದ್ಯುತ್ ಮಂಡಳಿಗೆ ಗೊತ್ತಾಗಿದೆ. ಇದು ಸರ್ಕಾರದ ಮುಂದೆ ಇರುವುದರಿಂದ, ಶೀಘ್ರವಾಗಿ ಕೆಲಸ ತೆಗೆದುಕೊಳ್ಳುತ್ತೇವೆ ಎಂದು ತಮ್ಮ ಮೂಲಕ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಎರಡು ವರ್ಷಗಳಿಂದ ಹಣ ಕಟ್ಟಿ ಬಾಕಿ ಉಳಿದಿದೆ.

ಶ್ರೀ ಎಸ್.ಎಂ. ಕೃಷ್ಣ : ಈ ನೇಮಕಾತಿಗಳ ವಿಚಾರದಲ್ಲಿ ಒಂದು ವಿವರಣೆಯನ್ನು ಕೊಡಬೇಕಾಗಿರುವುದು ಪ್ರಸ್ತುತ ಎಂದು ನಾನು ಭಾವಿಸುತ್ತೇನೆ ಸುಮಾರು ಒಂದು ಸಾವಿರ ಹುದ್ದೆಗಳನ್ನು ನೇಮಕ ಮಾಡಬೇಕೆಂದು ತೀರ್ಮಾನವನ್ನು ವಿದ್ಯುತ ಮಂಡಳಿ ತೆಗೆದುಕೊಂಡಿದೆ. ಆದರೆ, ಸರ್ಕಾರದ ಗಮನಕ್ಕೆ ಒಂದು ವಿಚಾರ ಬಂತು, ಅದೇನೆಂದರೆ, ನಾವು ತಿಳಿದಿದ್ದೆವು. ಸರ್ಕಾರ ಅನುಮತಿಯನ್ನು ಕೊಟ್ಟಾಗ ಹೊಸದಾಗಿ ಅರ್ಜಿಗಳನ್ನು ಕರೆದು ಅನಂತರ ವಿಧಿವತ್ತಾಗಿ, ನೇಮಕಾತಿ ಮಾಡುತ್ತಾರೆ ಎಂದು ತಿಳಿದಿದ್ದೆವು. ಆದರೆ, ಬಹುಶಃ ಕಮ್ಯುನಿಕೇಷನ್ ಗ್ಯಾಪ್ ಎಂದು ಕಾಣುತ್ತದೆ. 199-91ನೇ ಇಸವಿಯಲ್ಲಿ ಅವರು, ಏನು ಅರ್ಜಿಗಳನ್ನು ಕರೆದಿದ್ದರು, ಆ ಅರ್ಜಿಗಳ ಆಧಾರದ ಮೇಲೆ, ಕೆಲವು ಸ್ಥಳಗಳಲ್ಲಿ ಇಂಟರ್ವ್ಯೂ ನೋಟೀಸುಗಳನ್ನು ಕಳುಹಿಸಿದ್ದಾರೆ. ಶಿವಮೊಗ್ಗ, ಮೈಸೂರು, ಬೆಳಗಾವಿ ಇಲ್ಲೆಲ್ಲಾ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಕೆಲವರು ಬಂದಾಗ,

ನಮ್ಮ ಉದ್ದೇಶವೇನೆಂದರೆ, ಈಗ ಯಾರು ಪ್ರಾಪ್ತವಯಸ್ಕರಾಗತಕ್ಕವರು ಕ್ವಾಲಿಫೈ ಆಗುತ್ತಿದ್ದಾರೆ ಅವರಿಗೂ ಕೂಡ ಅವಕಾಶ ಕಲ್ಪಿಸಿಕೊಡಬೇಕೆಂಬ ದೃಷ್ಟಿಯಿಂದ ಈಗ ಆಗಿರತಕ್ಕ ಸಂದರ್ಶನಗಳನ್ನು ರದ್ದು ಮಾಡಿ, ಹೊಸದಾಗಿ ಕರೆದು ನೇಮಕಾತಿ ಮಾಡಿಕೊಳ್ಳಬೇಕೆಂಬ ಸೂಚನೆಯನ್ನು ಕೊಟ್ಟಿದ್ದೇವೆ. ಅತಿ ಶೀಘ್ರದಲ್ಲಿಯೇ ಅವರು ಅರ್ಜಿಗಳನ್ನು ಕರೆಯುತ್ತಾರೆ.

ಶ್ರೀ ವಿಜಯಕುಮಾರ್ ಶೆಟ್ಟಿ: ಇದು ಬಹಳ ಅಗತ್ಯವಿದೆ, ಟೈಮ್‌ಬೌಂಡ್ ಪ್ರೋಗ್ರಾಂ ಹಾಕಿಕೊಂಡು ಮಾಡಿದರೆ ಒಳ್ಳೆಯದು. ಒಂದು ಜಿಲ್ಲೆಯಲ್ಲಿಯೇ 450 ಜನ ಖಾಲಿ ಇರುವಾಗ, ಒಟ್ಟು ರಾಜ್ಯದಲ್ಲಿ ಎಷ್ಟು ಜನ ಇದ್ದಾರೆ.

ಅಧ್ಯಕ್ಷರು: ನೀವು ಬೇರೆ ರೂಪದಲ್ಲಿ ಕೇಳಿ. ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಂ. ಇದಿನಬ್ಬ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಡೀ ಜಿಲ್ಲೆ ಬಂದ್ ಆಗಿದೆ. ದೊಡ್ಡ ಸಮಸ್ಯೆಯಾಗಿದೆ.

ಅಧ್ಯಕ್ಷರು: ನೀವು ಇದರ ಬಗ್ಗೆ ಬೇಕಾದರೆ ಅರ್ಧಗಂಟೆ ಚರ್ಚೆಗೆ ಕಳುಹಿಸಿಕೊಡಿ.

ಹೊಸದಾಗಿ ಮಂಜೂರಾಗಿರುವ ರಾಷ್ಟ್ರೀಯ ಹೆದ್ದಾರಿಗಳು

23 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಕ್ಕೆ ಸುಮಾರು ಇಪ್ಪತ್ತು ವರ್ಷಗಳಿಂದ ಈಚೆಗೆ ಮಂಜೂರಾಗಿರುವ ರಾಷ್ಟ್ರೀಯ ಹೆದ್ದಾರಿಯ ಉದ್ದವೆಷ್ಟು?

ಆ) ಭಾರತ ಸರ್ಕಾರದ ರಸ್ತೆ ಅಭಿವೃದ್ಧಿ ಯೋಜನೆಯನ್ವಯ, ಕರ್ನಾಟಕ ರಾಜ್ಯವು ಹಾಲಿ ಎಷ್ಟು ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಯನ್ನು ಹೊಂದಿರಬೇಕಾಗಿತ್ತು.

ಇ) ಹೊಂದಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) 20 ವರ್ಷಗಳಿಂದೀಚೆಗೆ ಹೊಸದಾಗಿ ರಾಜ್ಯದ ಯಾವ ಹೆದ್ದಾರಿಯನ್ನೂ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಿರುವುದಿಲ್ಲ.

ಆ) 3215 ಕಿ.ಮೀ. ಇರಬೇಕಾಗಿತ್ತು. ಆದರೆ ರಾಜ್ಯದಲ್ಲಿ ಹಾಲಿ 1997 ಕಿ.ಮೀ.ಗಳ ರಾಷ್ಟ್ರೀಯ ಹೆದ್ದಾರಿ ಮಾತ್ರ ಇದೆ.

ಇ) ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವುದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ. 1972 ರಿಂದೀಚೆಗೆ ಒಟ್ಟು 4400 ಕಿ.ಮೀ. ಉದ್ದದ 13 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಒತ್ತಾಯಿಸಲಾಗುತ್ತಿದೆ. ಆದರೆ, ಕೇಂದ್ರ ಸರ್ಕಾರವು ಈ ಬಗ್ಗೆ ಹಣಕಾಸಿನ ಲಭ್ಯತೆಯನ್ನು ಅನುಸರಿಸಿ 8ನೇ ಪಂಚವಾರ್ಷಿಕ ಯೋಜನೆಯ ಮಧ್ಯಭಾಗದಲ್ಲಿ ಪ್ರಸ್ತಾಪಗಳನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದ್ದಾರೆ.

ಶ್ರೀ ಎ.ಟಿ. ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷರೇ, ಭಾರತ ಸರ್ಕಾರದ ಈ ರಸ್ತೆ ಅಭಿವೃದ್ಧಿ ಯೋಜನೆಯನ್ವಯ ನಮ್ಮ ರಾಜ್ಯಕ್ಕೆ ಇಂದಿಗೆ 3215 ಕಿ.ಮೀ. ಇರಬೇಕಾಗಿದ್ದ ಈ ರಾಷ್ಟ್ರೀಯ ಹೆದ್ದಾರಿ ಇಂದು 1997 ಕಿ.ಮೀ. ಇದೆ. 20 ವರ್ಷಗಳಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಹೊಸದಾಗಿ ಒಂದು ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಸೇರ್ಪಡೆ ಆಗಿಲ್ಲ ಎಂದು ಸನ್ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇದರಿಂದ ರಾಜ್ಯಕ್ಕೆ ಮಹದನ್ಯಾಯ ಆಗಿದೆ ಎಂದು ಸರ್ಕಾರಕ್ಕೆ ಅನ್ನಿಸುವುದಿಲ್ಲವೇ? ಬೇರೆ ರಾಜ್ಯಗಳಿಗೂ 20 ವರ್ಷಗಳಿಂದ ಒಂದು ಕಿ.ಮೀ. ರಾಷ್ಟ್ರೀಯ ಹೆದ್ದಾರಿಗೆ ಸೇರ್ಪಡೆ ಆಗಿದೆಯೋ ಇಲ್ಲವೋ ದಯಮಾಡಿ ತಿಳಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್: ರಾಜ್ಯಕ್ಕೆ ಅನ್ಯಾಯ ಆಗಿದೆ. ಹೊಸದಾಗಿ ಒಂದು ಕಿ.ಮೀ. ನಮಗೆ ಸೇರಿಲ್ಲ. ನಾವು ಮೇಲಿಂದ ಮೇಲೆ ಒತ್ತಾಯ ಮಾಡುತ್ತಿದ್ದೇವೆ. ನಾನು ಈ ಇಲಾಖೆ ವಹಿಸಿಕೊಂಡ ಮೇಲೆ, ಮುಖ್ಯ ಮಂತ್ರಿಯಿಂದ ಕೂಡ ಪತ್ರ ಬರೆಸಿದೇನೆ. ನಾನೂ ಪತ್ರ ಬರೆದಿದ್ದೇನೆ. ಆದರೆ ಕರ್ನಾಟಕದ ದುರಾದೃಷ್ಟ ನಮಗೆ